ಶೂನ್ಯ ವೇಳೆ ಪ್ರಸ್ತಾಪ

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- (ಅ) ಸೊಲ್ಲಾಪುರದ ಹತ್ತಿರ ಇರುವ ಉಜನಿ ಡ್ಯಾಂನ ಎತ್ತರ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :- ಮಾನ್ಯ ಅಧ್ಯಕ್ಷರೇ, ಈ ಸದನದ ಗಮನಕ್ಕೆ ಅತ್ಯಂತ ಮಹತ್ವದ ವಿಷಯವನ್ನು ತರತಕ್ಕಂಥಾದ್ದು ನನ್ನ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಮೊನ್ನೆ ಆಲಮಟ್ಟಿ ಡ್ಯಾಂ ಹಾಗೂ ಜುರಾಲ ಡ್ಯಾಂನ ಬಗ್ಗೆ ಪ್ರಸ್ತಾಪ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು, ತಮ್ಮ ಗಮನಕ್ಕೆ ಮಹತ್ವವಾದಂತಹ ವಿಷಯಗಳು ಬಂದರೆ ತಾವು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು, ನೀವು ಅದಕ್ಕೋಸ್ಕರ ಕಾಯಬೇಕಾಗಿರಲಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದರು. ಬಹುಶಃ ನಿನ್ನೆ ಪತ್ರಿಕೆಯಲ್ಲಿ ಬಂದಂತಹ ವಿಚಾರವನ್ನು ನೋಡಿ ಸರ್ಕಾರ ಅದರ ಬಗ್ಗೆ ಚಿಂತನೆ ಮಾಡಿದೆ ಎಂದು ನಾನು ಭಾವಿಸಿದ್ದೇನೆ. ಇಂಡಿಯನ್ ಎಕ್ಸ್‌ಪ್ರೆಸ್, ಮತ್ತು ಇವತ್ತಿನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಕೂಡ ಈ ಉಜನಿ ಡ್ಯಾಂ ಬಗ್ಗೆ ಪ್ರಸ್ತಾಪವಾಗಿದೆ. ಈ ಉಜನಿ ಡ್ಯಾಂ ಅನ್ನು ಭೀಮಾ ನದಿಗೆ ಸೊಲ್ಲಾಪುರ ತಾಲ್ಲೂಕಿನಲ್ಲಿ ಕಟ್ಟಿಸಲಾಗಿದೆ. ಇವತ್ತು ಈ ಉಜನಿ ಡ್ಯಾಂನ ಎತ್ತರವನ್ನು ಮಾಡತಕ್ಕಂಥ ಪ್ರಸ್ತಾವನೆ ಮಹಾರಾಷ್ಟ್ರ ಸರ್ಕಾರದ ಮುಂದೆ ಇದೆ. ಯಾವ ರೀತಿಯಾಗಿ ಆಂಧ್ರದವರು ಜುರಾಲ ಡ್ಯಾಂನ್ನು ನಮಗೆ ಹೇಳದೇ ಕೇಳದೆ ಸುಮಾರು ಒಂದು ಮೀಟರ್ ಎತ್ತರ ಎತ್ತರಿಸಿದರು; ಅದೇ ರೀತಿಯಲ್ಲಿ ಮಹಾರಾಷ್ಟ್ರ ಸರ್ಕಾರ ಕೂಡ ಇವತ್ತು ಒಂದು ತೀರ್ಮಾನವನ್ನು ತೆಗೆದುಕೊಂಡು ಈ ಉಜನಿ ಡ್ಯಾಂನ್ನು ಎತ್ತರಿಸಬೇಕು ಎನ್ನುವ ವಿಚಾರವನ್ನು ಚರ್ಚೆ ಮಾಡಿದ್ದಾರೆ. ಮತ್ತು ಇದು ಮಹಾರಾಷ್ಟ್ರ ಸದನದಲ್ಲಿ ಸರ್ಕಾರದ ಸಂಬಂಧಪಟ್ಟ ಮಂತ್ರಿ ಕೂಡ, ಸಂಬಂಧಪಟ್ಟ ಮಂತ್ರಿ ಎಂದರೆ ಅಲ್ಲಿ ಡ್ಯಾಂ ಕನ್‌ಸ್ಟ್ರಕ್ಷನ್ ಮಿನಿಸ್ಟರ್ ಎಂದು ಹೇಳಿ ಇದ್ದು ಅವರು ಮಾಧವ್‌ರಾವ್, ಶಿವನ್‌ಕರ್ ಎಂಬುವವರು ಸ್ಪಷ್ಟವಾಗಿ ಹೇಳಿದ್ದಾರೆ. ಅದೇನೆಂದರೆ ಈ ಉಜನಿ ಡ್ಯಾಂನ್ನು ನಾವು ಎತ್ತರಿಸುವಂತಹ ಯೋಚನೆ ಮಾಡುತ್ತಿದ್ದೇವೆ, ಕಾರಣ ಏನೆಂದರೆ ಈಗಿರತಕ್ಕಂಥ ಡ್ಯಾಂನಿಂದ ಕೇವಲ ಸೊಲ್ಲಾಪುರದ ಮೂರು ತಾಲ್ಲೂಕಿಗೆ ಮಾತ್ರ ನೀರಾವರಿಯಾಗುತ್ತದೆ. ಆದಕ್ಕಾಗಿ ಇದನ್ನು ಎತ್ತರಿಸಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ.

``Minister for Dams Construction Mr. Madhavrao Shivankar said, his Government is committed to raise the dam height. The Minister told the Maharastra Assembly on july 24th that the Cabinet has taken a decision about raising the height. However, a final decision would be taken after getting a report from the Experts Committee which is expected by the August end. The Maharashtra

Government had referred the matter of raising the dam height to an Experts Committee following the conflicting demands from the elected representatives of the State. As per demand of the local MLAs."

ಎಂದು ಹೇಳಿ ಅವರು ಸ್ಪಷ್ಟವಾಗಿ 24 ನೇ ಜುಲೈನಲ್ಲಿ ಮಹಾರಾಷ್ಟ್ರ ಅಸೆಂಬ್ಲಿಯಲ್ಲಿ ಈ ಹೇಳಿಕೆಯನ್ನು ಕೊಟ್ಟಿದ್ದಾರೆ. ಒಂದು ವೇಳೆ ಹೇಳಿದ ಪ್ರಕಾರ ಅಲ್ಲಿನ ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟ್‌ನ ಆಧಾರದ ಮೇರೆಗೆ ಆ ಉಜನಿ ಡ್ಯಾಂಅನ್ನು ಎತ್ತರಿಸಿದರೆ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಎರಡು ಜಿಲ್ಲೆಗಳು ಕುಡಿಯುವ ನೀರಿಗೂ ಕೂಡ ಬಡಿದಾಡಲೇಬೇಕಾಗುತ್ತದೆ. ಒಂದು ಕಡೆ ಭೀಮಾ ನದಿ ಮೇಲೆ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ನ್ನು ಅಫ್ಜಲ್‌ಪುರ್ ತಾಲ್ಲೂಕಿನಲ್ಲಿ ತೆಗೆದುಕೊಳ್ಳುತ್ತಿದ್ದು, ಇನ್ನೊಂದು ಕಡೆ ಭೀಮಾ ಫ್ಲೋ ಇರಿಗೇಷನ್ ಎಂದು ಇನ್ನೊಂದು ಪ್ರಾಜೆಕ್ಟ್ ಇದೆ. ಅದೂ ಕೂಡ ಇನ್ನೂ ಪ್ರಾರಂಭವಾಗಿಲ್ಲ. ಅದು ಇನ್‌ವೆಸ್ಟಿಗೇಷನ್ ಹಂತದಲ್ಲಿದೆ. ಇಲ್ಲಿಯವರೆಗೆ ಅದಕ್ಕೆ ಕೇವಲ 5 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ. ಇದೂ ಅಲ್ಲದೆ ಬಿಜಾಪುರ ಜಿಲ್ಲೆಯಲ್ಲಿ ಬರತಕ್ಕಂಥ ಇಂಡಿ, ಸಿಂಧಗಿ, ಗುಲ್ಬರ್ಗ, ಅಫ್ಜಲ್‌ಪುರ್, ಶಹಾಪುರ್, ಜೇವರ್ಗಿ, ಚಿತಾಪುರ್, ಗುಲ್ಬರ್ಗ ತಾಲ್ಲೂಕು ಹಾಗೂ ಯಾದಗಿರಿ ತಾಲ್ಲೂಕು ಇಷ್ಟೊಂದು ತಾಲ್ಲೂಕುಗಳು, ಭೀಮಾ ನದಿ ಬ್ಯಾರೇಜ್ ಮೇಲೆ ಬಾರ್ಡರ್‌ನಲ್ಲಿ ಇರತಕ್ಕಂಥ ಹಳ್ಳಿಗಳು ಏನಿವೆ ಆ ಹಳ್ಳಿಗಳಿಗೆ ನೀರಿನ ವ್ಯವಸ್ಥೆ ಈ ಭೀಮಾ ನದಿಯಿಂದ ಆಗುತ್ತಿದೆ. ಅದೂ ಅಲ್ಲದೆ ಗುಲ್ಬರ್ಗ ಪಟ್ಟಣಕ್ಕೆ ಅಲ್ಲಿ ಬ್ಯಾರೇಜ್ ಕಟ್ಟಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು 5-6 ಲಕ್ಷ ಜನರಿಗೆ ಮಾಡಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇದ್ದಾಗ ನಾವು ಪ್ರತಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗಾಗಿ ಮಹಾರಾಷ್ಟ್ರ ಸರ್ಕಾರಕ್ಕೆ ಅರ್ಜಿಯನ್ನು ಹಾಕಿ ಇಷ್ಟು ನೀರನ್ನು ಬಿಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅವರು ಕೆಲವು ಸಾರಿ ಬಿಡುತ್ತಾರೆ, ಕೆಲವು ಸಲ ಒತ್ತಡ ತಂದು ಮಹಾರಾಷ್ಟ್ರ ಸರ್ಕಾರಕ್ಕೆ ನಮ್ಮ ಸರ್ಕಾರದ ಸೆಕ್ರೆಟರಿಯೇಟ್‌ನಿಂದ ಕಾಗದ ಬರೆದಾದಮೇಲೆ ಕೊಡ ತಕ್ಕಂಥ ವ್ಯವಸ್ಥೆ ಅನೇಕ ಬಾರಿಯಾಗಿದೆ. ಇಂತಹ ಪರಿಸ್ಥಿತಿ ಇರುವಾಗ ನಾರ್ಮಲ್ ಕೋರ್ಸ್‌ನಲ್ಲಿ ನಮಗೆ ಕುಡಿಯುವ ನೀರಿನ ವ್ಯವಸ್ಥೆ ಸಿಗುವುದಿಲ್ಲ. ಮತ್ತು ನಾರ್ಮಲ್ ಕೋರ್ಸ್‌ನಲ್ಲಿ ನಮ್ಮ ಜನರಿಗೆ ಈ ಒಂದು ವ್ಯವಸ್ಥೆ ಇಲ್ಲ. ಆಂದಾಗ ನಮ್ಮ ಪ್ರಾಜೆಕ್ಟ್ ಅಂತೂ ಕೊಡಿಸತಕ್ಕಂಥದ್ದು ಒಂದು ಕಡೆ ಉಳಿಯುತ್ತದೆ, ಇನ್ನೊಂದು ಕಡೆ ಕುಡಿಯುವ ನೀರಿಗೆ ತಾಪತ್ರಯ ಬರತಕ್ಕಂಥ ಸಾಧ್ಯತೆ ಇದೆ. ಮೂರನೆಯದು, ಅವರು ಈಗಿರತಕ್ಕಂಥ ಉಜನಿ ಡ್ಯಾಂ ಅನ್ನು ಸುಮಾರು 3 ಆಥವಾ 4 ಮೀಟರ್ ಎತ್ತರ ಮಾಡಿ ಸುಮಾರು ಎಂಟು ತಾಲ್ಲೂಕು ಸೊಲ್ಲಾಪುರ್ ಜಿಲ್ಲೆಯ ಬರಗಾಲಪೀಡಿತ ಪ್ರದೇಶ ಏನು ಇವೆ ಅದಕ್ಕೆ ನೀರು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಅವರು ಸ್ಪಷ್ಟಪಡಿಸಿದ್ದಾರೆ. ಈಗಾಗಲೇ ಇರತಕ್ಕಂಥ ತಾಲ್ಲೂಕುಗಳು ಈ ಉಜನಿ ಡ್ಯಾಂನಿಂದ ಪ್ರಯೋಜನ ಪಡೆಯತಕ್ಕಂಥ ತಾಲ್ಲೂಕುಗಳು ಎಂದರೆ ಮಹಾರಾಷ್ಟ್ರದಲ್ಲಿ ಪಂಡಾರಪುರ ತಾಲ್ಲೂಕು, ಮಳಸಿರಾಸ ತಾಲ್ಲೂಕು, ಮಂಗಳವೇಡ ತಾಲ್ಲೂಕು. ಈ ಮೂರು ತಾಲ್ಲೂಕುಗಳಲ್ಲಿ ಇವೊತ್ತು ಇರಿಗೇಷನ್ ಈ ಒಂದು ಉಜನಿ ಡ್ಯಾಮ್‌ನಿಂದ ಆಗುತ್ತಿದೆ.

ಏತಕ್ಕಾಗಿ ಇದನ್ನು ವಿಸ್ತರಿಸಬೇಕು ಸುಮಾರು 3-4 ಮೀಟರ್ ಎತ್ತರ ಮಾಡಿ ಎಂದರೆ ಈ ಒಂದು ಸೊಲ್ಲಾಪುರ ದಕ್ಷಿಣ ಮತ್ತು ಉತ್ತರ ಈ ಭಾಗದಲ್ಲಿ ಸುಮಾರು ಎಂಟು ತಾಲ್ಲೂಕುಗಳಲ್ಲಿ ಇವೊತ್ತು ಇರಿಗೇಷನ್ ಫೆಸಿಲಿಟೀಸ್ ಕೊಡಬೇಕೆಂದು ಹೇಳಿ ಉಜನಿ ಡ್ಯಾಂ ಅನ್ನು ಎತ್ತರ ಮಾಡತಕ್ಕಂಥ ಪ್ರಯತ್ನ ನಡೆದಿದೆ. ಇದರಿಂದ ನಮ್ಮ ದೌನ್ ಸ್ಟ್ರೀಮ್‌ನಲ್ಲಿ, ವಿಶೇಷವಾಗಿ ಬಿಜಾಪುರ ಮತ್ತು ಗುಲ್ಬರ್ಗಾದ ಲಕ್ಷಾಂತರ ಜನ ಮತ್ತು ಜಾನುವಾರುಗಳಿಗೆ ತೊಂದರೆ ಆಗತಕ್ಕಂಥದ್ದು ಸ್ಪಷ್ಟ ಇದೆ. ಇದನ್ನು 24 ನೇ ತಾರೀಖಿ ಅಸೆಂಬ್ಲಿಯಲ್ಲಿ ಚರ್ಚೆಮಾಡಿದ್ದಾರೆ. ಅವರೂ ಕೂಡ ನಮ್ಮ ಸರ್ಕಾರಕ್ಕೆ ಇದರ ಬಗ್ಗೆ ಗೊತ್ತಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ; ಆದರ ಬಗ್ಗೆಯೂ ಕೂಡ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಬೇಕು. ಮತ್ತು ಸಾವಿರಾರು ಹಳ್ಳಿಗಳು ಇದರಿಂದ ತೊಂದರೆಗೀಡಾಗುವುದರಿಂದ ಮತ್ತು ದೊಡ್ಡ ದೊಡ್ಡ ಪಟ್ಟಣಗಳು ಈಗ ಗುಲ್ಬರ್ಗಾ ತಾಲ್ಲೂಕು, ಆಫ್ಜಲ್‌ಪುರ, ಯಾದಗಿರ್ ಇನ್ನೂ ಕೆಲವು ಕಡೆಗಳಲ್ಲಿ ಕುಡಿಯುವ ನೀರನ್ನು ಅವರು ಭೀಮಾ ರಿವರ್‌ನಿಂದ ತೆಗೆದುಕೊಳ್ಳುತ್ತಾರೆ, ಅದಕ್ಕಾಗಿ ಇದರ ಬಗ್ಗೆಯೂ ಕೂಡ ತಾವು ಎಷ್ಟರಮಟ್ಟಿಗೆ ಕಾಳಜಿಯನ್ನು ವಹಿಸಿ ಈ ಕೆಲಸವನ್ನು ಮಾಡುತ್ತೀರಿ ಹಾಗೂ ಈ ಇಂಡಿ ಮತ್ತು ಸಿಂಧಗಿಗೂ ಕೂಡ ಇದರ ಪ್ರಯೋಜನ ಆಗುತ್ತಿದೆ. ಅದನ್ನೂ ಕೂಡ ತಾವು ಇದರಲ್ಲಿ ಪ್ರಸ್ತಾಪ ಮಾಡಿ ಇದರ ಬಗ್ಗೆ ಹೇಳಬೇಕು ಎಂಬತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಏಕೆಂದರೆ ಈಗ ಭೀಮಾ ರಿವರ್ ಪ್ರಾಜೆಕ್ಟ್ ಬಗ್ಗೆ ಹೇಳಬೇಕಾದರೆ ಒಂದು ಟಿ.ಎಂ.ಸಿ. ನೀರನ್ನೂ ಉಪಯೋಗ ಮಾಡಿಕೊಳ್ಳಲಿಲ್ಲ. ನಮ್ಮ ಕೃಷ್ಣಾ ಬೇಸಿನ್‌ನಲ್ಲಿ ಇರತಕ್ಕಂಥ 734 ಟಿ.ಎಂ.ಸಿ. ಬಗ್ಗೆ ಭೀಮಾ ರಿವರ್‌ನಿಂದ ಟ್ರಿಬ್ಯುಟರಿ ಇದೆ; ರಾಯಚೂರಿನ ಹತ್ತಿರ ಜಾಯಿನ್ ಆಗುತ್ತದೆ. ಒಂದು ಟಿ.ಎಂ.ಸಿ. ನೀರನ್ನೂ ಉಪಯೋಗ ಮಾಡಿಕೊಳ್ಳತಕ್ಕಂಥದ್ದಕ್ಕೆ ನಾವು ಇಲ್ಲಿಯವರೆಗೆ ಪ್ರಯತ್ನ ಮಾಡಿಲ್ಲ. ಈಗೇನು 91 ಆಥವಾ 92 ರಲ್ಲಿ ಈ ಭೀಮಾ ಲಿಫ್ಟ್ ಇರಿಗೇಷನ್‌ಗೆ ಫೌಂಡೇಷನ್ ಹಾಕಿ ಅಲ್ಲಿ ಕೇವಲ 1 ಕೋಟಿ 24 ಲಕ್ಷ ರೂಪಾಯಿ ಮಾತ್ರ ಖರ್ಚುಮಾಡತಕ್ಕಂಥ ಒಂದು ಪ್ರಯತ್ನ ನಡೆದಿದೆ. ಅದನ್ನು ಬಿಟ್ಟರೆ ಇಲ್ಲಿಯವರೆಗೆ ಯಾವ ಕೆಲಸವೂ ಕೂಡ ಅಲ್ಲಿ ಪ್ರಾರಂಭವಾಗಿಲ್ಲ. ಭೀಮಾ ಲಿಫ್ಟ್ ಇರಿಗೇಷನ್‌ನಲ್ಲಿ ಸೊನ್ನೆಹಳ್ಳಿ, ಆಫ್ಜಲ್‌ಪುರ ಅಲ್ಲಿ 190 ಕೋಟಿ ರೂಪಾಯಿಯ ಎಷ್ಟಿಮೇಟ್ ಮಾಡಿ ಈ ಒಂದು ಪ್ರಾಜೆಕ್ಟ್‌ನ್ನು ತೆಗೆದು ಕೊಳ್ಳಬೇಕು ಎನ್ನತಕ್ಕಂಥದ್ದು ಒಂದು, ನೀರಾವರಿಗೆ ಇವೊತ್ತು ಇನ್‌ವೆಸ್ಟಿಗೇಷನ್ ಪ್ರಕಾರ ಒಂದು ಕೋಟಿ 24 ಲಕ್ಷ ಪ್ರಾಜೆಕ್ಟ್‌ನಿಂದ 24,282 ಹೆಕ್ಟೇರ್‌ಗೆ ನೀರು ಕೊಡತಕ್ಕಂಥ ವ್ಯವಸ್ಥೆ ಆಗಬೇಕು ಎಂದು ಹೇಳಿ, ಆದರೆ 1994-95, 1995-96 ಖರ್ಚಾದ ಎಲ್ಲಾ ಹಣ ಸೇರಿ ಒಂದು ಕೋಟಿ 22 ಲಕ್ಷ ಬಿಟ್ಟರೆ ಇಲ್ಲಿಯವರೆಗೆ ಯಾವ ಹಣವೂ ಕೂಡ ಖರ್ಚಾಗಿಲ್ಲ ಎಂದರೆ ಎಷ್ಟರಮಟ್ಟಿಗೆ ಭೀಮಾ ನದಿಯ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕು ಎನ್ನತಕ್ಕಂಥದ್ದರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇದೆ ಎನ್ನುವುದು ಇದರಿಂದ ತೋರಿಸುತ್ತದೆ. ಮಾನ್ಯ ಅಧ್ಯಕ್ಷರೇ ಇನ್ನೊಂದು ಪ್ರಜೆಕ್ಟ್ ಏನು ಇದೆ ಭೀಮಾ ಲಿಫ್ಟ್ ಫ್ಲೋ ಪ್ರಾಜೆಕ್ಟ್ ಇದೂ ಕೂಡ ಸುಮಾರು 185 ಕೋಟಿ 15 ಲಕ್ಷ ರೂಪಾಯಿಗಳ ಎಸ್ಟಿಮೇಟ್. ಸುಮಾರು 42.170 ಹೆಕ್ಟೇರ್‌ಗೆ ನೀರು ಕೊಡತಕ್ಕಂಥ ಈ ಒಂದು ಭೀಮಾ ರಿವಲ್ ಫ್ಲೋ ಪ್ರಾಜೆಕ್ಟ್ ಇದೆ. ಆದರೆ ಇಲ್ಲಿಯವರೆಗೆ ಆದಕ್ಕೆ

ಹಣವನ್ನು ಇಟ್ಟಿದ್ದು ಕೇವಲ 30 ಲಕ್ಷ, ಖರ್ಚಾದದ್ದು 5 ಲಕ್ಷ. ಆ 5 ಲಕ್ಷದಲ್ಲೂ ಕೂಡ ಬರೇ ರಸ್ತೆ ಮಾಡುವುದಕ್ಕೆ ಖರ್ಚುಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಏಕೆ ಈ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಈ ಉಜಿನಿ ಡ್ಯಾಂ ಒಂದು ವೇಳೆ ಅವರು ಎತ್ತರಿಸಿದರೆ ಖಂಡಿತವಾಗಿ ಗುಲ್ಬರ್ಗಾ, ಬಿಜಾಪುರ ಜಿಲ್ಲೆಗೆ ಏನು ಈ ಪ್ರಾಜೆಕ್ಟ್‌ನಿಂದ ಆಗತಕ್ಕಂಥ ಅಥವಾ ಸಿಗತಕ್ಕಂಥ ಅನುಕೂಲ ಏನು ಇದೆ ಅದು ಸಿಗುವುದಿಲ್ಲ ಎನ್ನತಕ್ಕಂಥದ್ದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದಕ್ಕಾಗಿ ಇಂತಹ ಒಂದು ಪರಿಸ್ಥಿತಿಯಲ್ಲಿ ಇರತಕ್ಕಂಥ ಆ ಎರಡು ಪ್ರಾಜೆಕ್ಟ್ ಸನತಿ, ಸೋನ್, ಇವೆರಡೂ ಪ್ರಾಜೆಕ್ಟ್‌ಗಳೂ ಕೂಡ ಬರತಕ್ಕಂಥದ್ದು ಸಾಧ್ಯತೆ ಇಲ್ಲ ಮತ್ತು ಅಲ್ಲಿನ ಸರ್ಕಾರ ಇವೊತ್ತಿನ ದಿವಸ ಸಾಕಷ್ಟು ಪ್ರಯತ್ನ ಮಾಡಿ ಇದನ್ನು ಬೇಗನೆ ಪ್ರಾರಂಭ ಮಾಡಬೇಕು ಎನ್ನತಕ್ಕಂಥದ್ದು ಈಗಾಗಲೇ ಮಾಡಿದ್ದಾರೆ. ಮತ್ತು ಒಂದು ಎಕ್ಸ್‌ಪರ್ಟ್ಸ್ ಕಮಿಟಿಯನ್ನು ರಚಿಸಲಾಗಿದ್ದು ಆಗಸ್ಟ್ ತಿಂಗಳೊಳಗಾಗಿ ಅದರ ವರದಿ ಬರುವ ಸಾಧ್ಯತೆ ಇದೆ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಉಜಿನಿ ಡ್ಯಾಂ ಅಲ್ಲದೆ ಅವರು ಏನು ಮಾಡುತ್ತಿದ್ದಾರೆಂದರೆ ಸ್ಮಾಲ್ ಸ್ಮಾಲ್ ಬ್ಯಾರೇಜ್‌ಗಳನ್ನು ಮಾಡಿ ಲಿಫ್ಟ್ ಇರಿಗೇಷನ್‌ನಿಂದ ನೀರು ತೆಗೆದುಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ, ಇದರ ಬಗ್ಗೆ ಆಸಕ್ತಿಯನ್ನು ವಹಿಸಿ ಏನೇನು ಕೆಲಸ ಮಾಡಿದ್ದಾರೆ, ಮತ್ತೆ ಈ ಎರಡು ಪ್ರಾಜೆಕ್ಟ್‌ಗಳನ್ನು ಮುಗಿಸ ತಕ್ಕಂಥದ್ದು ಯಾವಾಗ ಮಾಡುತ್ತೀರಿ ಇದನ್ನು ಹೇಳಬೇಕು. ಈಗ ಆಲಮಟ್ಟಿ ಕುರಿತಂತೆ ವಿವಾದವಿದೆ, ಸದನದಲ್ಲೂ ಕೂಡ ಸಾಕಷ್ಟು ಚರ್ಚೆಯಾಯಿತು, ಈಗ ಅದು ಹೈಕೋರ್ಟಿನ ಮುಂದೆ ಇದೆಯೆಂದು ಕಾಣುತ್ತದೆ, ತಮ್ಮ ವಕೀಲರಾದ ನಾರಿಮನ್ ಮತ್ತು ಇಲ್ಲಿನ ವಕೀಲರು ಎಲ್ಲರೂ ಕೂಡ ಅಪಿಯರ್ ಆಗುವವರಿದ್ದಾರೆ ಎಂದು ಕೇಳಿದ್ದೇನೆ. ಹೀಗೆ ಭೀಮಾ ರಿವರ್‌ದ್ದೂ ಕೂಡ ಈಗ ಕಾವೇರಿಯದು ಯಾವರೀತಿ ವಿವಾದಾಸ್ಪದವಾಗಿ ಶಾಶ್ವತವಾಗಿ ಉಳಿದುಕೊಂಡಿದೆ ಅದೇರೀತಿ ಇದೂ ಕೂಡ ವಿವಾದಾಸ್ಪದವಾಗುತ್ತದೆ. ಹೀಗೆ ಒಟ್ಟಿನಲ್ಲಿ ಆಲಮಟ್ಟಿ ಒಂದು ಕಡೆ, ಜುರಾಲ ಒಂದುಕಡೆ ಮೂರನೆಯದು ಉಜಿನಿ ಡ್ಯಾಂ ಒಂದು ಕಡೆ ಹೀಗೆ ಮೂರು ವಿವಾದಗಳು ಕೃಷ್ಣಾ ಬೇಸಿನ್‌ನಲ್ಲಿ ಬಂದಾಗ ಕಾವೇರಿ ವಿವಾದದಂತೆ ಇವೂ ಶಾಶ್ವತ ವಿವಾದಾಸ್ಪದ ಸ್ಥಳವಾಗುತ್ತದೆ ಎಂಬುದನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದಕ್ಕೆ ತಾವು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು ಮತ್ತು 24 ನೇ ತಾರೀಖು ಮಹಾರಾಷ್ಟ್ರ ಅಸೆಂಬ್ಲಿಯಲ್ಲಿ ಏನು ನಿರ್ಣಯವನ್ನು ಪಾಸು ಮಾಡಿದ್ದಾರೆ ಆ ನಿರ್ಣಯದ ಬಗ್ಗೆಯೂ ಕೂಡ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎನ್ನತಕ್ಕಂಥದ್ದರ ಬಗ್ಗೆ ಸ್ಪಷ್ಟವಾಗಿ ಮಾಹಿತಿಯನ್ನು ಕೊಡ ಬೇಕು. ತಾವು ಚರ್ಚೆಗೆ ಅವಕಾಶ ಕೊಡಬೇಕು ಇಲ್ಲದಿದ್ದರೆ ಮಾನ್ಯ ಮಂತ್ರಿಯವರು ಸವಿಸ್ತಾರವಾಗಿ ಉತ್ತರವನ್ನು ಸದನದ ಗಮನಕ್ಕೆ ತರಬೇಕು. ಇದರ ಬಗ್ಗೆ ಎಷ್ಟರಮಟ್ಟಿಗೆ ಆಸಕ್ತಿಯನ್ನು ವಹಿಸುತ್ತಿದ್ದಾರೆಂಬ ಬಗ್ಗೆ ಹೇಳಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ.

+ **ಶ್ರೀ ಕೆ. ಎಸ್. ನಾಗೇಗೌಡ** (ಭಾರಿ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಸದನದಲ್ಲಿ ಬಹಳ ಮಹತ್ವವಾದಂತಹ ವಿಚಾರವನ್ನು ಎತ್ತಿದ್ದಾರೆ. ಅವರಿಗೆ ನನ್ನ ವಂದನೆಗಳು, ಇಂತಹ ವಿಚಾರಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರೆ ಒಳ್ಳೆಯದು. ಮೂಲಭೂತವಾಗಿ ಉಜಿನಿ ಡ್ಯಾಮ್ ಎತ್ತರದ ಬಗ್ಗೆ ಹೇಳಿದ್ದಾರೆ. ಮಹಾರಾಷ್ಟ್ರದ ಸದನದಲ್ಲಿ ಸಂಬಂಧಪಟ್ಟಂಥ ಮಂತ್ರಿಯವರು ಇದರ ಬಗ್ಗೆ ಹೇಳಿಕೆಯನ್ನು ಮಾಡಿದ್ದಾರೆಂಬ ವಿಷಯವನ್ನು ತಿಳಿದು ನಾನು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ನಾವು ನೀವು ಕುಳಿತು ಏನು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡೋಣ. ಮಹಾರಾಷ್ಟ್ರದ ಮಂತ್ರಿಗಳು ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಮತ್ತು ಈ ಸಮಿತಿಯು ಆಗಸ್ಟ್‌ನಲ್ಲಿ ವರದಿ ಕೊಟ್ಟಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದಾರೆಂದು ತಿಳಿದುಬಂದಿದೆ. ಮೂಲಭೂತವಾಗಿ ಈ ಉಜನಿ ಡ್ಯಾಮ್ ಬಗ್ಗೆ ನಮಗೂ ಅವರಿಗೂ ಯಾವುದೇ ಮನಸ್ತಾಪ ಬಂದಿರಲಿಲ್ಲ. ಈ ಹಿಂದೆ ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಕೃಷ್ಣ ನದಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ನಡೆದ ಆಂಧ್ರ ಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಸಭೆಯಲ್ಲೂ ಈ ವಿಚಾರ ಪ್ರಸ್ತಾಪಕ್ಕೆ ಬಂದಿರಲಿಲ್ಲ. ಈಗ ಈ ಡ್ಯಾಮ್ ಎತ್ತರಿಸುವಂತಹ ವಿವಾದ ಬಂದಿದೆ. ಈ ಡ್ಯಾಮ್ 90.02 ಟಿ.ಎಂ.ಸಿ. ನೀರು ಸಂಗ್ರಹವಾಗುವಂತಹ ಸಾಮರ್ಥ್ಯವನ್ನು ಹೊಂದಿದ್ದು, The parties made an agreed statement that the following projects, quantum of utilisation on evaporation loss as mentioned below should be estimated....ಭೀಮ ನದಿಯಲ್ಲಿ ಉಜನಿಯಿಂದ 9 ಟಿ.ಎಂ.ಸಿ. ನೀರು ಹರಿಯಬೇಕಾಗಿದೆ. ಆದರಲ್ಲಿ 6 ಟಿ.ಎಂ.ಸಿ. ಭೀಮ ನದಿಯಿಂದ 3 ಟಿ.ಎಂ.ಸಿ. ಗೋದಾವರಿಯಿಂದ ಅಂದರೆ ಆರು ಪ್ಲಸ್ ಮೂರು ಒಟ್ಟು 9 ಟಿ.ಎಂ.ಸಿ. ನೀರು ಹರಿಯಬೇಕಾಗಿದೆ. ಆದರೆ ಈಗ ಮಾನ್ಯ ಸದಸ್ಯರು ಎತ್ತಿರುವಂತಹ ವಿಚಾರ ಮಹಾರಾಷ್ಟ್ರದವರು ಡ್ಯಾಮ್‌ಅನ್ನು ಎತ್ತರಿಸುವ ಬಗ್ಗೆ ಸದ್ಯಕ್ಕೆ ನನ್ನ ಬಳಿ ಮಾಹಿತಿ ಇಲ್ಲ. ಇದು ಪತ್ರಿಕೆಗಳಲ್ಲಿ ಬಂದರೂ ಸಹ, ಇದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಸೂಚನೆ ನೀಡಿ ಅವರನ್ನು ಮಹಾರಾಷ್ಟ್ರಕ್ಕೆ ಕಳುಹಿಸಿ 90 ಟಿ.ಎಂ.ಸಿ. ಮೇಲೆ ಎಷ್ಟು ಉಪಯೋಗಿಸಿದ್ದಾರೆ. ಅವರ ಟೆಕ್ನಿಕಲ್ ರಿಪೋರ್ಟ್ ಯಾವಾಗ ಬರುತ್ತದೆಂಬುದನ್ನು ಕಲೆಕ್ಟ್ ಮಾಡುತ್ತೇನೆ.

SRI M. MALLIKARJUNA KHARGE:- According to the Minister for Dam construction, Madhava Rao Shivankar, his Government committed to raising dam height. The Minister told the Maharashtra Assembly on 24th July, that they have decided to raise the dam height and the expert committee will decide. They have decided to raise it. It may be 1 foot or 2 feet or 10 feet.

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಅಧ್ಯಕ್ಷರೇ, ಇದು ಇವತ್ತಿನವರೆಗೂ ಕನ್‌ಫರ್ಮ್ ಆಗಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸೇರಿದಂತಹ ಸಭೆಯಲ್ಲೂ ಇದು ಕನ್‌ಫರ್ಮ್ ಆಗಿಲ್ಲ. ಈಗ 24 ನೇ ತಾರೀಖಿನಂದು ಅವರು ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆಂಬ ಮಾಹಿತಿ ಇರುವುದು. ಆದರೆ ಬಚಾವತ್ ಅವಾರ್ಡ್ ಪ್ರಕಾರ 90.02 ಟಿ.ಎಂ.ಸಿ. ಎಂದು ಇದೆ. ಅದಕ್ಕಿಂತ ಹೆಚ್ಚು ಮಾಡಿದ ಸಂದರ್ಭದಲ್ಲಿ ನಾವು ಸಿ.ಡಬ್ಲ್ಯೂ.ಸಿಗೆ ಕಂಪ್ಲೇಂಟ್ ಕೊಡುವಂತಹ ಮತ್ತು ಏನು ಕ್ರಮವನ್ನು ತೆಗೆದು ಕೊಳ್ಳಬೇಕೆಂಬ ಬಗ್ಗೆ ಯೋಚನೆ ಮಾಡುತ್ತೇವೆ. ಭೀಮ ರಿವರ್ ಫ್ಲೋ ಯೋಜನೆಗೆ 185 ಕೋಟಿ ರೂಪಾಯಿಗಳು ಮತ್ತು ಭೀಮ ಲಿಫ್ಟ್ ಇರೀಗೇಷನ್ 118 ಕೋಟಿ ರೂಪಾಯಿಗಳ ಮೊತ್ತವನ್ನು ಅಂದಾಜು ಮಾಡಲಾಗಿದೆ. ಇದರಿಂದ ಸುಮಾರು ಆರವತ್ತು, ಎಪ್ಪತ್ತು ಸಾವಿರ ಹೆಕ್ಟೇರ್ ಭೂಮಿಗೆ ನೀರಿನ ಸೌಲಭ್ಯ ಸಿಗುವುದು. ಪ್ರಸಕ್ತ ವರ್ಷದಲ್ಲಿ 1996-97 ಕ್ಕೆ ಒಂದು ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಈ ವಿಷಯವಾಗಿ ಫೈನಾನ್ಸ್ ಮಿನಿಸ್ಟರ್ ಬಳಿ ಮಾತನಾಡಿ 1 ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿದ್ದೇನೆ. ಭೀಮ ಲಿಫ್ಟ್ ಮತ್ತು ಭೀಮ ಫ್ಲೋ ಯೋಜನೆಗಳನ್ನು ಮತ್ತು ಇತರ ಅರ್ದುಜ ಯೋಜನೆಗೆ 1.92 ಕೋಟಿ ರೂಪಾಯಿಗಳು ಮತ್ತು ಲೋವರ್ ಮುಲ್ಲಾಮರೀ ಯೋಜನೆಗೆ 0.83 ಕೋಟಿ ರೂಪಾಯಿಗಳು ಇವುಗಳನ್ನು ಮುಂದಿನ ವರ್ಷದಲ್ಲಿ ಪೂರ್ಣ ಮಾಡುವಂತಹ ಯೋಜನೆ ಇದೆ. ಈಗ ಹಣಕಾಸಿನ ಮಂತ್ರಿಯವರ ಹತ್ತಿರ 10 ಕೋಟಿ ರೂಪಾಯಿ ಗಳನ್ನು ಭೀಮ ಏತ ನೀರಾವರಿಗೆ ಕೊಡಬೇಕೆಂಬ ಬಗ್ಗೆ ಮಾತುಕತೆಯಾಗಿದೆ. ಈ ಹಣವನ್ನು ಇನ್ನು 15-20 ದಿವಸಗಳಲ್ಲಿ ಕೊಡುತ್ತಾರೆ. ಇನ್ನು 90.02 ಟಿ.ಎಂ.ಸಿ. ಗಳಿಗಿಂತ ಹೆಚ್ಚು ನೀರನ್ನು ಸಂಗ್ರಹ ಮಾಡುವಂತಹ ಕೆಲಸವನ್ನು ಮಾಡಿದರೆ ನಾವು ಸಿ.ಡಬ್ಲ್ಯೂ.ಸಿಯ ಮುಂದೆ ಹೋಗಿ ದೂರು ನೀಡುತ್ತೇವೆ. ಈ ವಿಷಯದಲ್ಲಿ ನಾವು ಹಿಂದುಮುಂದು ನೋಡುವುದಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ಡೀಟೈಲ್ಡ್ ರಿಪೋರ್ಟ್ ತರಿಸಿಕೊಳ್ಳುವುದಕ್ಕೆ, ಮತ್ತು ಅವರು ಎಷ್ಟು ಹೆಚ್ಚಿಸುವುದಕ್ಕೆ ಮಾಡಿದ್ದಾರೆ, ಮತ್ತು ಇದುವರೆಗೂ ಇದರ ಬಗ್ಗೆ ತಕರಾರು ಇಲ್ಲದ ಕಾರಣ ಇನ್ನು ಒಂದೆರಡು ವಾರಗಳಲ್ಲಿ ಬಹಳ ಸೂಕ್ಷ್ಮವಾಗಿ ತಮಗೆ ನಾನು ವರದಿಯನ್ನು ಕೊಡುತ್ತೇನೆ. 90.02 ಟಿ.ಎಂ.ಸಿ. ಗಿಂತ ಹೆಚ್ಚು ಮಾಡುವಂತಹ ಕೆಲಸವನ್ನು ಅವರು ಮಾಡಿದ್ದಲ್ಲಿ ಬಚಾವತ್ ನ್ಯಾಯ ಮಂಡಳಿಯ ತೀರ್ಪನ್ನು ವಯಲೇಟ್ ಮಾಡಿದರೆ ನಾವು ಖಂಡಿತವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಈಗ ನಮ್ಮ ರಾಜ್ಯದಲ್ಲಿ ಬರಗಾಲ ಇದೆ. ಬೀದರ್, ಗುಲ್ಬರ್ಗಾ ಡಿಸ್ಟ್ರಿಕ್ಟ್ ಆಫೀಸರ್ಸ್ ಮಳೆಯ ಕೊರತೆ ಇದೆ ಎಂದು ತಿಳಿಸಿದ್ದಾರೆ. ನಮ್ಮಲ್ಲಿ ಸ್ಕೇರ್ಸಿಟಿ ಇರುವುದರಿಂದ ಇಲ್ಲಿ ನೀರಿನ ವ್ಯವಸ್ಥೆಯಾಗಬೇಕೆಂಬ ಮಾತನ್ನು ಹೇಳಿದ್ದಾರೆ. ಈಗ ಅವರು ಹೈಟ್ ಮಾಡಿದರೆ ನಾವು ಅವರನ್ನು ಪದೇ ಪದೇ ನೀರು ಕೇಳಬೇಕಾಗುತ್ತದೆ. ಅವರು ಕುಡಿಯುವ ನೀರನ್ನು ಬಿಡುವುದಿಲ್ಲ. ಅವರಿಗೆ ನೀವು ಸ್ಟೋರ್ ಮಾಡುವ ಬಗ್ಗೆ ಪ್ರೊಟೆಸ್ಟ್ ಮಾಡುತ್ತೀರಿ.

ಈಗ ಅವರು ಡ್ಯಾಮ್ ಕಟ್ಟಿದ ಮೇಲೆ ಕೊಡುತ್ತಾರೆಂದರೆ ಆಗುವುದಿಲ್ಲ. ಏಕೆಂದರೆ ಗುಲ್ಬರ್ಗಾದ ಎಲ್ಲಾ ಪಟ್ಟಣಗಳಿಗೆ ನೀರು ಒದಗಿಸುತ್ತಿರುವಂಥಾದ್ದು ಭೀಮ ನದಿಯಿಂದ ಮಾತ್ರ ಸಾಧ್ಯ, ಆದುದರಿಂದ ತಾವು ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಕೆ. ಎನ್. ನಾಗೇಗೌಡ :- ಅವರು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಈ ಕೂಡಲೇ ಮಹಾರಾಷ್ಟ್ರದ ಮಂತ್ರಿಗಳು, ಮುಖ್ಯ ಕಾರ್ಯದರ್ಶಿ ಹಾಗೂ ಇತರೆ ಅಧಿಕಾರಿಗಳ ಜೊತೆ ಮಾತನಾಡಿ ಮಾಹಿತಿಗಳು ಏನಿವೆ ಅವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡನೆಯದು, ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಕರ್ನಾಟಕ ರಾಜ್ಯಕ್ಕೆ ಎಷ್ಟು ನೀರು ಬರಬೇಕು ಅದನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗುವುದು; ಅದನ್ನು ಬಿಡುವುದಿಲ್ಲ.

ಅಧ್ಯಕ್ಷರು :- ಈಗ ಶೂನ್ಯ ವೇಳೆ, ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ ಹಾಗೂ ಬಸವನ ಗೌಡರು ಮಾತನಾಡುವುದು.

(ಆ) ಆಲಮಟ್ಟಿ ಜಲಾಶಯದ ನೀರಿನಿಂದಾಗಿ ಕೆಲವು ಹಳ್ಳಿಗಳ ಜಲಾವೃತವಾಗಿರುವುದು.

+ **ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ (ಬೀಳಗಿ ಕ್ಷೇತ್ರ)** :- ಸನ್ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಜಲಾಶಯದ ನೀರಿನಿಂದಾಗಿ ಎರಡು-ಮೂರು ದಿವಸಗಳಿಂದ ಸುಮಾರು ಇಪ್ಪತ್ತು ಇಪ್ಪತ್ತೈದು ಹಳ್ಳಿಗಳು ಜಲಾವೃತವಾಗಿವೆ. ಬೀಳಗಿ ತಾಲ್ಲೂಕಿನಲ್ಲಿ ಹದಿಮೂರು ಹಳ್ಳಿಗಳು ಮುಳುಗಡೆಯಾಗಿವೆ, ಜನರನ್ನು ಶಿಫ್ಟ್ ಮಾಡತಕ್ಕಂಥ ಕೆಲಸ ನಾಲ್ಕೈದು ದಿವಸಗಳಿಂದ ನಡೆಯುತ್ತಿದೆ. ಈ ದುರ್ದೈವದಿಂದ ಪುನರ್ವಸತಿ ಕೇಂದ್ರಗಳಲ್ಲಿ ಇದುವರೆವಿಗೂ ಯಾವುದೇ ವಿದ್ಯುತ್ ಸರಬರಾಜಿಲ್ಲ, ಕುಡಿಯುವ ವ್ಯವಸ್ಥೆ ಇಲ್ಲ, ಔಷಧ ಪೂರೈಕೆ ಇಲ್ಲ ಅದು ಅಲ್ಲದೆ ಆಹಾರಧಾನ್ಯದ ಪೂರೈಕೆಯೂ ಕೂಡ ಇಲ್ಲ. ಈಗಾಗಲೇ ಕೆಲವು ಹಳ್ಳಿಗಳಲ್ಲಿ ವಿಷಜಂತುಗಳು, ವಿಷಸರ್ಪಗಳು ಬಂದು ಜನರನ್ನು ಕಚ್ಚಿದ ಪ್ರಸಂಗ ಬಂದಿದೆ. ಅದೂ ಅಲ್ಲದೆ ನಾನು ಹೋದ ದಿವಸ ಎಂಟು-ಹತ್ತು ವಿಷಸರ್ಪಗಳನ್ನು ಆ ಬೀರಕಬ್ಬ ಎನ್ನುವಂಥ ಹಳ್ಳಿಯಲ್ಲಿ ಕೊಂದು ಹಾಕಿದ್ದರು. ಅದೂ ಅಲ್ಲದೆ, ಈ ರೀತಿ ದನಕರುಗಳಿಗೆ ಮೇವಿನ ವ್ಯವಸ್ಥೆಯನ್ನೂ ಕೂಡ ಮಾಡಿಲ್ಲ. ಈ ಪುನರ್ವಸತಿ ಕೇಂದ್ರದ ಜನರಿಗೆ ದಿಕ್ಕು ತೋಚದಂತಾಗಿದೆ. ಈ ದಿಸೆಯಲ್ಲಿ ಸರ್ಕಾರ ಸ್ಪಷ್ಟವಾಗಿ ನಿಲುವನ್ನು ತಾಳಿ, ಬೇಗನೆ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಆದೂ ಅಲ್ಲದೇ, ಈ ಅಧಿಕಾರಿಗಳ ತಪ್ಪು ಸರ್ವೇಯಿಂದ, ಈ ಮೊದಲನೇ ಹಂತದಲ್ಲಿ ಜಮೀನು ಮುಳುಗುವುದಿಲ್ಲವೆಂದು ತಿಳಿದುಕೊಂಡು ಯಾವ ಜಮೀನನ್ನೂ ಸರ್ವೇ ಮಾಡಿಲ್ಲ, ಇವತ್ತು ಆ ಕಂದಗಲ್ಲು ಎನ್ನುವ ಗ್ರಾಮದಲ್ಲಿ ಎರಡನೂರು ಎಕರೆ ಸ್ಟ್ಯಾಂಡಿಂಗ್ ಕ್ರಾಪ್ ಮುಳುಗಡೆಯಾಗಿದೆ. ಇದರಿಂದಾಗಿ ಒಂದೇ ಊರಿನಲ್ಲಿ ಕನಿಷ್ಟ ಇಪ್ಪತ್ತೈದರಿಂದ ಮೂವತ್ತು ಲಕ್ಷ ರೂಪಾಯಿಗಳು ನಷ್ಟವಾಗಿದೆ. ಇದಲ್ಲದೆ ಇನ್ನೂ ಬೇರೆ ಬೇರೆ ಗ್ರಾಮಗಳಲ್ಲಿ ಎರಡು-ಮೂರು ಎಕರೆ ಸ್ಟ್ಯಾಂಡಿಂಗ್‌ಕ್ರಾಪ್,